ಹಿರಿಯ ಸಿವಿಲ್  ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,  ಹರಿಹರ
**ಸಿ. ಸಿ.  27/2016**

**ಸಿ. ಡಬ್ಲೂ. 55**
**ಪಿ.ಡಬ್ಲೂ.49**

**ಹೆಸರುಃ** ದಿಳ್ಳೆಪ್ಪ .

**ತಂದೆಃ** ಬಡಕಪ್ಪ ಬಣಕಾರ್

**ವಯಸ್ಸುಃ** **69** ವರ್ಷ.

**ಕೆಲಸಃ** ವ್ಯವಸಾಯ.

**ವಾಸಃ** ಕವಲತ್ತು ರಾಣೇಬೆನ್ನೂರು .

**ಇಂದು  ದಿನಾಂಕ:06-07-2024** ರಂದು ಸಾಕ್ಷಿಯನ್ನು **ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆಃ  ಎ.ಪಿ.ಪಿ ರವರಿಂದಃ

ಚಾಸ 53 ರ ಪರಿಚಯ ಇದೆ.  ಚಾಸ 54 ಇವರ ಪರಿಚಯ ಇದೆ.  ಹಾಜರು ಇರುವ ಆರೋಪಿಯ ಪರಿಚಯ ಇದೆ. ಆತ ನಮ್ಮ ಭತ್ತ ಖರೀದಿ ಮಾಡಿರುತ್ತಾರೆ. ದಿನಾಂಕಃ14-06-2006 ಕುಮಾರ ಪಟ್ಟಣಕ್ಕೆ ಗಾಡಿ ಕಳುಹಿಸಿ ಭತ್ತ ಖರೀದಿ ಮಾಡಲು ಕಳುಹಿಸಿರುತ್ತಾರೆ.  ನನ್ನ 25 ಚೀಲ ಭತ್ತ 18 ಕ್ವಿಂಟಲ್ ಅದರ ಧರ ಕ್ವಿಂಟಲ್ ರೂ.1550 ಇತ್ತು.  ಶ್ರೀನಿವಾಸ್ ರೈಸ್ ಮಿಲ್ ಗೆ ತಂದು ಹಾಕಿದೆನು. ತೂಕ ಮಾಡಿ ಭತ್ತ ಪಡೆದರು. ಒಂದು ತಿಂಗಳು ಬಿಟ್ಟು ಹಣಕೊಡುತ್ತೇನೆ ಎಂದು ಹೇಳಿದ್ದರು.  ಸುಮಾರು 20 ದಿನಗಳ ನಂತರ ಹೋಗಿ ಕೇಳಲು ಏನು ಗೊತ್ತಾಗಲಿಲ್ಲ.  ಆರೋಪಿ ನಾಪತ್ತೆಯಾಗಿದ್ದಾನೆ ಎಂದು ಗೊತ್ತಾಯಿತು. ದಿನಾಂಕಃ26-06-2010 ರಂದು ನಾವು, ರೈತರು ಪಿರ್ಯಾದಿ ಕೊಟ್ಟರು.   ಸಾಕ್ಷಿಗೆ ಸಂಬಂಧಿಸಿದ ಒಂದು ಪಹಣಿಯನ್ನು ನಿ.ಪಿ-43 ಎಂದು ಗುರುತಿಸಲಾಯಿತು.

ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯಕೇಳಿದ್ದು, ಸ್ವ ಕಾರಣ ಇಲ್ಲದೇ ಸಮಯ ಕೇಳಿದ ಕಾರಣ ಅವರ ಪಾಟೀ ಸವಾಲು ಇರುವುದಿಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾ . ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-
**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**